

# ಈ ಯುಗದ ವಿಷಕನ್ಯೆಯ ಹೆಸರು ಕೊರೊನಾ

**ಸದ್ಯಕ್ಕೆ ಜಗತ್ತನ್ನು ದಿಕ್ಕೆಡಿಸಿರುವ ರೋಗ ಕೊರೊನಾ. ಎಲ್ಲಿ ನೋಡಿದರೂ ಕೊರೊನಾದ್ದೇ ಮಾತು. ಆ ಮಾತಿನಲ್ಲಿ ಸತ್ಯದ ಜೊತೆ ಜೊತೆಗೇ ಹಲವು ಸುಳ್ಳುಸುದ್ದಿಗಳೂ ಇವೆ. ಈ ವೈರಸ್ ಹಿನ್ನೆಲೆ ಏನು? ಹೇಗೆ ಹರಡುತ್ತದೆ. ನಾವು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳೇನು? ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಈ ಲೇಖನದಲ್ಲಿದೆ.**

■ ಡಾ. ಸಿ. ರವೀಂದ್ರನಾಥ್

ದೇವರನ್ನು ಸರ್ವಾಂತರ್ಯಾಮಿ ಎನ್ನುತ್ತೇವೆ. ವಿಜ್ಞಾನದ ಮಟ್ಟಿಗೆ ಆ ಅಗ್ಗಳಿಕೆ ಸೂಕ್ಷ್ಮಾಣುಜೀವಿಗಳಿಗೆ ಸಲ್ಲುತ್ತದೆ. ಈ ಭೂಮಿಯ ಮೇಲಿನ ಮೊಟ್ಟ ಮೊದಲ ಜೀವಿಗಳಾಗಿ ಅವುಗಳಿದ್ದವು, ಅವು ಈಗಲೂ ಇವೆ. ಒಂದು ವೇಳೆ ಮಾನವ ಕುಲ ನಾಶ ಹೊಂದಿದರೂ ಅವು ಇರುತ್ತವೆ. ಅವುಗಳಿಲ್ಲದೆ ನಾವಿಲ್ಲ. ಈ ಪ್ರಕೃತಿಯ ಆಗುಹೋಗುಗಳನ್ನು ಅತ್ಯಂತ ಸೂಕ್ಷ್ಮವಾಗಿ ನಿಯಂತ್ರಿಸುತ್ತಿವೆ ಅವು; ಪ್ರಕೃತಿಯ ಒಂದು ಭಾಗವೇ ಆಗಿವೆ. ಆ ಸೂಕ್ಷ್ಮಜೀವಿಗಳು ಮನುಷ್ಯ ಹುಟ್ಟಿದ ಕೆಲ ಗಂಟೆಗಳಲ್ಲೇ ಆವರಿಸಿಕೊಳ್ಳುತ್ತವೆ. ಚರ್ಮದ ಒಂದೊಂದು ಕಣ ಕಣದಲ್ಲೂ ಒಳಗೂ ಹೊರಗೂ...

ಭೂಮಿ ಫಲವತ್ತಾಗಲು, ಹೆಣ ಕೊಳೆಯಲು, ಹಾಲು ಮೊಸರಾಗಲು ಇವು ಅವುಗಳ ಅಸ್ತಿತ್ವದ, ಕ್ರಿಯಾಶೀಲತೆಯ ಕೆಲವು ಉದಾಹರಣೆಗಳಷ್ಟೆ. ಮಣ್ಣು, ಗಾಳಿ, ನೀರು ಸಕಲ ಚರಾಚರ ವಸ್ತುಗಳಲ್ಲೂ ಇದ್ದು ಸೃಷ್ಟಿ, ಸ್ಥಿತಿ, ಲಯಗಳಲ್ಲಿ ಭಾಗವಹಿಸುತ್ತಿವೆ. ಅವು ನಮ್ಮಂತೆ ಜೀವಿಗಳು, ಅವುಗಳಿಗೂ ಬದುಕುವ ಹಕ್ಕಿದೆ. ನಾವು ಮನುಷ್ಯ ಕೇಂದ್ರಿತ ನೆಲೆಯಿಂದ ನೋಡದೆ ಜೀವ ಕೇಂದ್ರಿತ ನೆಲೆಯಿಂದ ನೋಡಿದಾಗ ಸೂಕ್ಷ್ಮಜೀವಿಗಳ ಕುರಿತ ನಮ್ಮ ಗ್ರಹಿಕೆ ಬದಲಾಗಬಹುದು. ಈ ಸೂಕ್ಷ್ಮಜೀವಿಗಳಲ್ಲಿ ಬ್ಯಾಕ್ಟೀರಿಯಾಗಳು, ವೈರಸ್‌ಗಳು ಹಾಗೂ ಶಿಲೀಂಧ್ರಗಳೂ ಸೇರಿವೆ. ಇವುಗಳಲ್ಲಿ ಮುಕ್ಕಾಲುಭಾಗಕ್ಕಿಂತಲೂ ಹೆಚ್ಚಿನವು ನಮಗೆ ಕೇಡನ್ನು ಬಯಸವು. ನಮಗೆ ಸಹಾಯ ಮಾಡಿ ನಮ್ಮ ಜೊತೆಗೆ ಇರಲು ಬಯಸುವಂತಹವು. ಉಳಿದ ಕಾಲುಭಾಗಕ್ಕಿಂತಲೂ ಕಡಿಮೆ ಸೂಕ್ಷ್ಮ ಜೀವಿಗಳು ಬಹುಶಃ ಯಾವುದೇ ದುರುದ್ದೇಶವಿಲ್ಲದೆ ಅವುಗಳ ಆಹಾರ ಬೇಟೆಯಲ್ಲಿ ನಮಗೆ ರೋಗ ತರಬಲ್ಲವು. ಅದೂ ಬಹಳಷ್ಟು ಸಲ ಮನುಷ್ಯನ ತಪ್ಪಿನಿಂದಲೇ. ಒಂದು ಮಾತಿದೆ 'ದೇ ಆರ್ ನಾಟ್ ಕಮಿಂಗ್ ಇನ್ ಅವರ್ ವೇ, ವಿ ಆರ್ ಕ್ರಿಸ್‌ಕ್ರಾಸಿಂಗ್ ಇನ್‌ದೇರ್ ಪಾಥ್' ಅವು ತಮ್ಮ ಪಾಡಿಗೆ ತಾವು ಇರುತ್ತವೆ. ನಾವು ಅವುಗಳ ದಾರಿಗೆ ಅಡ್ಡ ಬರುತ್ತಿದ್ದೇವೆ. ಈ ನೆಲ, ಜಲ, ಕಾಡು ಒಟ್ಟಾರೆ ಈ ಪ್ರಕೃತಿಯನ್ನು ನಾಶ ಮಾಡುತ್ತಿದ್ದೇವೆ. ಅದರ ಫಲ ಅನುಭವಿಸಲೇಬೇಕಾಗಿದೆ.

ಒಂದು ಮಾತಂತೂ ಸತ್ಯ. ಆ ಕಾಲು ಭಾಗ ಸೂಕ್ಷ್ಮಜೀವಿಗಳಲ್ಲಿ ಕೆಲವು ಭೀಕರ ರೋಗಗಳಿಗೆ ಕಾರಣವಾಗಿವೆ. ಹಾಗೆ ನೋಡಿದರೆ ಮಾನವ ಕುಲ ಪ್ರತಿ ಕಾಲಘಟ್ಟದಲ್ಲೂ ಒಂದಿಲ್ಲೊಂದು ರೋಗಾಣುವಿನ ತೆಕ್ಕೆಗೆ ಸಿಕ್ಕಿಹಾಕಿಕೊಂಡಿದ್ದು ಗೋಚರವಾಗುತ್ತದೆ. ಸಿಡುಬು, ಪ್ಲೇಗ್, ಸ್ಪ್ಯಾನಿಶ್ ಫ್ಲೂ, ಸ್ವೇನ್ ಫ್ಲೂ, ಎಚ್‌ಐವಿ, ಸಾರ್ಸ್ ಈಗ ಕೊರೊನಾ ವೈರಸ್! ಇಡೀ 'ಅಜ್‌ಟೆಕ್ ಸಾಮ್ರಾಜ್ಯ' (Aztec Empire) ಸಿಡುಬಿನಿಂದ ಒಂದು ವಾರದಲ್ಲಿ ಪತನವಾದರೆ, ಈ ಭೂಮಿಯ ಕಾಲುಭಾಗ ಜನರನ್ನು ಮಧ್ಯಯುಗದಲ್ಲಿ ಪ್ಲೇಗ್ ಬಲಿತೆಗೆದುಕೊಂಡಿತು. ಈ ಜಗತ್ತು ಕಂಡು ಕೇಳರಿಯದ ಸಾವು ನೋವು ಸಂಭವಿಸಿದ್ದು 1918ರಲ್ಲಿ ಅಪ್ಪಳಿಸಿದ ಸ್ಪ್ಯಾನಿಶ್ ಫ್ಲೂನಿಂದ. ಸುಮಾರು 5 ಕೋಟಿ ಜನರು ಅದರಿಂದ ಪ್ರಾಣತೆತ್ತರು. ಈಗ ಎಚ್‌ಐವಿ, ಸ್ವೈನ್ ಫ್ಲೂ ಜೊತೆಗೆ ಕೊರೊನಾ ಕಾಲಿರಿಸಿದೆ.

### ಸಾವು ತಟ್ಟುತ್ತದೆ ಚೈನಾ ಮಹಾಗೋಡೆಯ ಮೇಲೆ ಶುಷ್ಕ ಚಂದಿರನ ನೆರಳು

ಮಧ್ಯ ಚೀನಾದ ಹುಬೈ ಪ್ರಾಂತದ ಸುಂದರ ನಗರ ವುಹಾನ್. ಸುಮಾರು 3500 ವರ್ಷಗಳ ಇತಿಹಾಸವಿರುವ ಈ ನಗರ ಯಾಂಗ್‌ತ್ಸೆ ನದಿಯ ದಂಡೆಯ ಮೇಲಿದೆ. ಚೀನಾದ ಪ್ರಮುಖ ವಿದ್ಯಾಕೇಂದ್ರವಾದ ವುಹಾನ್‌ನಲ್ಲಿ ಸುಮಾರು 53 ವಿಶ್ವವಿದ್ಯಾಲಯಗಳಿವೆ. ಚೆರ್ರಿ ಹೂಗಳಿಂದ ಕಂಗೊಳಿಸುವ ವುಹಾನ್ ವಿಶ್ವವಿದ್ಯಾಲಯ